





# ಮುಂಗಾರಿಗೆ ಹೂವಿನ ತೋರಣ ಹಾಕಿ ಸ್ವಾಗತಿಸುವ ಸೀತಾಳೆ

ಮಾನ್ಸೂನ್ ಬಂತೆಂದರೆ ಪ್ರಕೃತಿಗೆ ಎಲ್ಲಿಲ್ಲದ ಸಂಭ್ರಮ. ಬೇಸಿಗೆಯ ಝಳದ ಬಿಸಿಲಿಗೆ ಮೈಯೊಡ್ಡಿ ದಣಿದ ಭೂಮಿಯ ದಾಹ ತಣಿಸುತ್ತದೆ ಮುಂಗಾರು. ಈ ಮುಂಗಾರನ್ನು ಹೂವಿನ ಚಪ್ಪರ ಹಾಕಿ ಸ್ವಾಗತಿಸುತ್ತದೆ ಸೀತಾಳೆ ಎಂಬ ಆರ್ಕಿಡ್. ಮಲೆನಾಡಿನ ಕಾಡಿನಲ್ಲಿ ಸೀತಾಳೆ ಹೆಚ್ಚಾಗಿ ಕಾಣಸಿಗುತ್ತದೆ.

## ಸೀತೆಯ ಮುಡಿಗೇರಿದ ಭಾಗ್ಯ

ಸೀತಾದೇವಿಯು ವನವಾಸ ಕಾಲದಲ್ಲಿ ಮುಡಿದುಕೊಳ್ಳುತ್ತಿದ್ದರಿಂದ ಈ ಹೂವಿಗೆ 'ಸೀತಾದಂಡೆ' ಎಂಬ ಹೆಸರು ಎಂದು ಪುರಾಣಗಳು ಮತ್ತು ಜಾನಪದ ಸಾಹಿತ್ಯ ಹೇಳುತ್ತದೆ.

ಪ್ರಪಂಚದಾದ್ಯಂತ ಸುಮಾರು 30 ಸಾವಿರ ಸೀತಾಳೆ ಪ್ರಭೇದಗಳನ್ನು ಗುರುತಿಸಲಾಗಿದೆ. ಇವುಗಳು ಹೆಚ್ಚಾಗಿ ಮರಕ್ಕೆ ಅಂಟಿಕೊಂಡು ಬೆಳೆಯುತ್ತವೆ. ಇಂಗ್ಲಿಷ್‌ನಲ್ಲಿ 'ಫಾಕ್ಸ್ ಟೈಲ್ ಆರ್ಕಿಡ್' (ನರಿಬಾಲದ ಆರ್ಕಿಡ್) ಎಂದು ಕರೆಯಲಾಗುವ ಇದರ ಸಸ್ಯಶಾಸ್ತ್ರೀಯ ಹೆಸರು ರಿಂಕೋಸ್ಟೈಲಿಸ್ ರೆಟುಸ.

ಸೀತಾಳೆ ದಂಡೆ, ಸೀತಾಳೆ ಗೆಡ್ಡೆ, ಸೀತೆಯ ಮಾಲೆ, ಸೀತಾಳಿ ಹೂ ಎಂದು ಅನೇಕ ಹೆಸರುಗಳು ಈ ಆರ್ಕಿಡ್‌ಗಿದೆ. ಸೀತಾ ಎಂದರೆ ಬಿಳಿ, ಅಳಿ ಎಂದರೆ ದುಂಬಿ. ಈ ಹೂವು ನೋಡಲು ದುಂಬಿಗಳ ದಂಡೆಯಂತೆ ಕಾಣುವುದರಿಂದ 'ಸೀತಾಳೆ ಹೂ' ಎಂಬ ಹೆಸರು ಅನ್ವರ್ಥ.

## ಹೂವಿನ ವಿಶೇಷ

ವರ್ಷಕೊಮ್ಮೆ ಮಳೆಗಾಲದ ಆರಂಭ ಕಾಲದಲ್ಲಿ ಚಿಗುರೊಡೆಯುವ ಸೀತಾಳೆ ಮೊಗ್ಗಿನ ದಂಡೆಯು ಹಸಿರು ಬಣ್ಣದಿಂದ ಕೂಡಿರುತ್ತದೆ. ಪೂರ್ಣವಾಗಿ ಅರಳಿದ ಹೂವಿನ ಒಂದು ದಂಡೆಯಲ್ಲಿ ನೂರಾರು ಸಣ್ಣ ಸಣ್ಣ ಹೂಗಳು ಪೋಣಿಸಿದಂತಿದ್ದು – ಅವು ನೇರಳೆ, ಗುಲಾಬಿ ಮತ್ತು ಬಿಳಿ ಬಣ್ಣಗಳ ಸಂಯೋಜನೆಯನ್ನು ಹೊಂದಿರುತ್ತವೆ. ಈ ಹೂದಂಡೆ 10ರಿಂದ 12 ದಿನಗಳ ಕಾಲ ನಳನಳಿಸುತ್ತವೆ. ಅರಳಿದ ಹೂವನ್ನು ಸೂಕ್ಷ್ಮವಾಗಿ ಗಮನಿಸಿದರೆ ಗರಿ ಬಿಚ್ಚಿ ಕುಣಿಯುತ್ತಿರುವ ನವಿಲಿನಂತೆ ಕಾಣುತ್ತದೆ.

## ಮನೆಯಂಗಳದ ಸೀತಾಳೆ

ಸೀತಾಳೆ ಪರಾವಲಂಬಿ ಸಸ್ಯ. ಆಗತಾನೇ ತನ್ನ ಬೇರನ್ನು ಮರಕ್ಕೆ ಅಂಟಿಸಿಕೊಳ್ಳುತ್ತಿರುವಂತಹ ಗಿಡಗಳನ್ನು ನಾವು ಕಾಡಿನಿಂದ ಕಿತ್ತು ತಂದು, ಮರಕ್ಕೆ ದಾರದಿಂದ ಸುತ್ತಿ, ದಿನ ಪೂರ್ತಿ ನೀರು ತೊಟ್ಟಿಕ್ಕುವಂತೆ ನೋಡಿಕೊಂಡೆವು. ನಂತರ ಅದು ಆ ಮರಕ್ಕೆ ಅವಲಂಬಿತವಾಯಿತು. ಒಂದು ವರ್ಷದ ನಂತರ ಒಂದು ದಂಡೆ ಅರಳಿತು. ಈಗ ಪ್ರತಿವರ್ಷವೂ ದಂಡೆಗಳ ಸಂಖ್ಯೆ ಏರುತ್ತಲೇ ಇದೆ. ಈ ಮುಂಗಾರು ಋತುವಿನಲ್ಲಿ 50ಕ್ಕೂ ಹೆಚ್ಚು ದಂಡೆಗಳು ಅರಳಿವೆ.

## ನೀವೂ ಬೆಳೆಯಿರಿ

ಕಾಡಿನಲ್ಲಿ ಮರಕ್ಕೆ ಅಂಟಿಕೊಂಡಿರುವ ಸೀತಾಳೆ ಗಿಡವನ್ನು ನಾಜೂಕಾಗಿ ತಂದು, ಯಾವುದೇ ಗಿಡ ಮರಗಳ ಕಾಂಡದ ಮೇಲೆ ಇಟ್ಟು, ಅದನ್ನು ಆ ಸ್ವಾವಲಂಬಿ ಸಸ್ಯಕ್ಕೆ ಅವಲಂಬಿತವಾಗುವಂತೆ ಮಾಡಬಹುದು. ಹೀಗೆ ಮಾಡಿದರೆ ಮರು ವರ್ಷದ ಮಳೆಗಾಲದ ಸಮಯಕ್ಕೆ ಹೂವು ಬಿಡುತ್ತದೆ.

ಕುಂಡದಲ್ಲೂ ಸೀತಾಳೆಯನ್ನು ಬೆಳೆಸಬಹುದು. ಕುಂಡಕ್ಕೆ ಹಲವು ರಂಧ್ರಗಳನ್ನು ಮಾಡಿ ಪಾಚಿ, ಇಟ್ಟಿಗೆ ಚೂರು, ಗೋಡು ಮಣ್ಣು, ಸ್ವಲ್ಪ ಇದ್ದಲಿನ ಪುಡಿ ಹಾಗು ಅಲ್ಪಪ್ರಮಾಣದಲ್ಲಿ ಎಲೆ ಗೊಬ್ಬರ ಹಾಕಿ ಬೆಳೆಸಬಹುದು. ಕುಂಡದಲ್ಲಿ ತೇವಾಂಶ ಯಾವಾಗಲೂ ಇರುವಂತೆ ನೋಡಿಕೊಳ್ಳಬೇಕು.

■ ಅಂಜನ್ ಕಾಯ್ಕಿಣಿ